## ಏರಿತು ಅಮಲು!



ಒಮ್ಮೆ ಸುರಲೋಕದ ನಾರದರು ವೇಷ ಬದಲಿಸಿ, ಪರೀಕ್ಷಾರ್ಥವಾಗಿ ಭೂಲೋಕಕ್ಕೆ ಬಂದರು. ಹಾಗೆಯೇ ಊರೊಂದರಲ್ಲಿ ತಿರುಗಾಡುತ್ತ ಬಳಿಯಿದ್ದ ಬಾರೊಂದನ್ನು ಪ್ರವೇಶಿಸಿದರು. ಕುರ್ಚಿಯೊಂದರಲ್ಲಿ ಕುಳಿತು ಮದ್ಯ ತರಲು ಸರ್ವರ್‌ಗೆ ಸೂಚಿಸಿದರು. ಸರ್ವರ್ ತಂದಿತ್ತ ಮದ್ಯವನ್ನು ಕುಡಿದು ಪುನಃ ತರಲು ಹೇಳಿದರು. ಹೀಗೆ ಮತ್ತೆ ಮತ್ತೆ ತಂದ ಮದ್ಯವನ್ನು ಕುಡಿದರೂ ಅಮಲೇರದ ಆ ಅಪರಿಚಿತನನ್ನು ನೋಡಿ ಸರ್ವರ್‌ಗೆ ಆಶ್ಚರ್ಯವಾಯಿತು. ಕೂಡಲೇ 'ನೀವು ಯಾರು?' ಎಂದು ಅವರನ್ನು ಪ್ರಶ್ನಿಸಿದ. ಆಗ ಆತ, 'ನಾನು ಸುರಲೋಕದ ನಾರದ' ಎಂದು ಉತ್ತರಿಸಿದ. ಆಗ ಸರ್ವರ್ ನಗುತ್ತ, 'ಬಡ್ಡೀ ಮಗ ಈಗ ಟೈಟಾದ' ಎಂದು ಉದ್ಗರಿಸಿದ!

**ಯಜ್ಞನಾರಾಯಣ ಉಳ್ಳೂರ**

## ಅರ್ಹರಿಗೆ ಬಹುಮಾನ



ಗುಂಡ ಒಮ್ಮೆ ಮಾಲ್ ಒಂದಕ್ಕೆ ಏನನ್ನೋ ಕೊಳ್ಳಲು ಹೋದ. ಅಲ್ಲಿ ಅವನಿಗೆ ದಿನಾಲು ನಡೆಯುವ ಲಕ್ಕಿ ಡ್ರಾನಲ್ಲಿ ಒಂದು ದೊಡ್ಡ 'ಟೆಡ್ಡಿ ಬೇರ್' ಬೊಂಬೆ ಬಹುಮಾನವಾಗಿ ಬಂತು. ಅದನ್ನು ತನ್ನ ಮೂವರು ಮಕ್ಕಳಿಗೆ ತೋರಿಸುತ್ತಾ, 'ನೋಡಿ ಮಕ್ಕಳೆ, ನಿಮ್ಮಲ್ಲಿ ಯಾರು ಅಮ್ಮನಿಗೆ ವಿಧೇಯರಾಗಿ, ಅವಳು ಹೇಳಿದ ಕೆಲಸವನ್ನು ಸ್ವಲ್ಪವೂ ಗೊಣಗದೆ ಚಾಚು ತಪ್ಪದೆ ಮಾಡುವಿರೊ ಅವರಿಗೆ ಈ ಬೊಂಬೆ ಕೊಡುತ್ತೇನೆ' ಎಂದ. ಆಗ ಆ ಮೂವರು ತಮ್ಮತಮ್ಮಲ್ಲೇ ಚರ್ಚಿಸಿ ನಂತರ ಒಮ್ಮತದಿಂದ ಅಂದರು: 'ಅಪ್ಪ, ಈ ಬೊಂಬೆಗೆ ಖಂಡಿತವಾಗಿಯೂ ಅರ್ಹರು ನೀವೇ!' ಅವರ ಮಾತುಕೇಳಿ ಗುಂಡ ದಂಗಾದ!

**ವಿ. ವಿಜಯೇಂದ್ರ ರಾವ್**

ಚಿತ್ರಗಳು: ಗಣೇಶ ಆಚಾರ್ಯ